

ಕೆಲವು ಕುತೂಹಲಕರ ಸಂಗತಿಗಳನ್ನು ಆತ ನನ್ನ ಗಮನಕ್ಕೆ ತಂದ. ಪೂವಯ್ಯನ ಕೆಲಸಗಾರ ಚೆಂದಕ್ಕಿ ಇಡೀ ದಿನದಲ್ಲಿ ಒಂದೆರಡು ಬಾರಿಯಷ್ಟೇ ಮನೆಯಿಂದ ಹೊರಗೆ ಕಾಣಿಸಿಕೊಂಡ. ನಂತರ ನಾನು ನಗರ ಪೊಲೀಸ್ ಠಾಣೆಗೆ ಹೋಗಿ ವಿಚಾರಿಸಿದೆ. ಪೂವಯ್ಯನ ನಾಪತ್ತೆಯ ಬಗ್ಗೆ ಯಾರೂ ದೂರು ಕೊಟ್ಟಿರಲಿಲ್ಲ! ಸುಬ್ಬಯ್ಯನ ಮೇಲೆ ಹಲ್ಲೆ ನಡೆಸಿದ ಪಾರ್ಕಿನಲ್ಲಿ ಒಂದೆರಡು ಜನರಲ್ಲಿ ವಿಚಾರಣೆ ಮಾಡಿದಾಗ ನನಗೆ ರೋಚಕ ಸುದ್ದಿಗಳು ದೊರಕಿದವು.

"ಬಿದ್ದಪ್ಪ, ಏನಾದರೂ ಉಪಯುಕ್ತ ಬೆಳವಣಿಗೆ ಇದೆಯೇ?" ಮರುದಿನ ಮಧ್ಯಾಹ್ನ ಕರಮಚಂದ ಚಹಾ ಹೀರುತ್ತಾ ವಿಚಾರಿಸಿದ.

"ಹಾಂ! ಇಡೀ ಪ್ರಕರಣಕ್ಕೆ ಒಂದು ರೂಪ ಕೊಡುವಷ್ಟು ವಿಷಯ ಸಂಗ್ರಹಿಸಿದ್ದೇನೆ. ಪೂವಯ್ಯನ ಪುತ್ರರಿಬ್ಬರೂ ಎರಡು ಬಾರಿ ನಗರ ಪೊಲೀಸ್ ಠಾಣೆಯ ಮೆಟ್ಟಿಲು ತುಳಿದವರು. ಒಮ್ಮೆ, ಸಾಲ ಕೊಟ್ಟವನು ವಾಪಸು ಕೇಳ್ದ ಅಂತ ಆತನ ಮೇಲೆ ಹಲ್ಲೆ ಮಾಡಿದ್ದಕ್ಕೆ, ಇನ್ನೊಮ್ಮೆ ಯಾರದ್ದೋ ಹಣ ಎಗರಿಸಿದ್ದಕ್ಕೆ! ಆದರೆ ಎರಡೂ ಪ್ರಕರಣಗಳೂ ರಾಜಿಯಲ್ಲಿ ಮುಕ್ತಾಯವಾಗಿ, ಅವರ ಮೇಲೆ ಕೇಸು ದಾಖಲಾಗಿಲ್ಲ. ಇಬ್ಬರೂ ಕೆಲಸ ಇಲ್ಲದೇ, ಕುಡಿಯುತ್ತಾ, ಅಪ್ಪನ ಹಣದಲ್ಲೇ ಕಾಲ ಕಳೆಯುತ್ತಿರುವವರು."

"ಅವರು ಹಣಕ್ಕಾಗಿ ಸುಬ್ಬಯ್ಯನ ಮೇಲೆ ಹಲ್ಲೆ ಮಾಡಿರಬೇಕು ಅಂತ ನೀನು ಹೇಳುವುದೇ?"

"ನನಗೊಬ್ಬ ಪ್ರತ್ಯಕ್ಷದರ್ಶಿ ಸಿಕ್ಕಿದ್ದ. ತಿಮ್ಮಯ್ಯ ಅಂತ. ಹಲ್ಲೆ ನಡೆದ ದಿವಸ ಪಾರ್ಕಿನಲ್ಲಿ ಅವ್ನು